**ಎಸ್.ಸಿ. ನಂ. 10/2019**

**ದೋ.ಸಾ. : 69 ಫ್ರಾ.ಸಾ. : 61**

ಸಾಕ್ಷಿಯ ಹೆಸರು : ಶಿವಕುಮಾರ್ ಕೆ. ಆರ್

**ದಿನಾಂಕಃ 07–03–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ–**

30. ಪರಿಸರ ಅಧಿಕಾರಿಗಳಿಗೆ ನೀಡಿದ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–165 ಎಂದು, ಸಾಕ್ಷಿಯ ಸಹಿಯನ್ನು ನಿಪಿ–165(ಎ) ಎಂದು ಗುರುತಿಸಲಾಯಿತು. ನಾವು ಸ್ಥಳ ಮಹಜರಿಗೆ ಹೋದ ಸಮಯದಲ್ಲಿ ಉಳವಿಯ ಅರಣ್ಯ ಪ್ರದೇಶದ ಫಾರೆಸ್ಟ್ ಗಾರ್ಡ್ ಹಾಗೂ ಫಾರೆಸ್ಟ್ ವಾಚರ್ ಆದ ಚಾಸಾ–22 ಮತ್ತು 23 ರವರು ದಿ.15–10–2018 ರಂದು 2 ಮತ್ತು 3 ನೇ ಆರೋಪಿತರನ್ನು ಹಾಗೂ ದಿ.16–10–2018 ರಂದು 2 ಮತ್ತು 3 ನೇ ಆರೋಪಿಯೊಂದಿಗೆ ಮತ್ತೊಬ್ಬ ವ್ಯಕ್ತಿಯನ್ನೂ ಸಹ ಉಳವಿಯ ಅರಣ್ಯ ಪ್ರದೇಶದಲ್ಲಿ ನೋಡಿದ ಬಗ್ಗೆ ಹೇಳಿದ್ದರಿಂದ, ನಾನು ದಿ.06–11–2018 ರಂದು ಉಳವಿಗೆ ಭೇಟಿ ನೀಡಿ, ಸಾಕ್ಷಿದಾರರಾದ ಚಾಸಾ–22 ಮತ್ತು 23 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

31. ಮೃತನ ಮರಣೋತ್ತರ ಪರೀಕ್ಷಾ ಕಾಲದಲ್ಲಿ ಸಂಗ್ರಹಿಸಿದ ವಸ್ತುಗಳನ್ನು ದಿ.13–11–2018 ರಂದು ಮಂಗಳೂರಿನ ಎಫ್.ಎಸ್.ಎಲ್. ಗೆ ಪರೀಕ್ಷೆಗಾಗಿ ಕೋರಿಕೆ ಪತ್ರದೊಂದಿಗೆ ಸಿಬ್ಬಂದಿಯಾದ ಚಾಸಾ–41 ರವರ ಮೂಲಕ ಕಳುಹಿಸಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದು ಒಟ್ಟು 16 ಪುಟಗಳಲ್ಲಿದ್ದು, ಅವುಗಳನ್ನು ನಿಪಿ–166 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–166(ಎ) ಎಂದು ಗುರುತಿಸಲಾಯಿತು. ಅದೇ ದಿನ, ಕಾರವಾರದ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರು ಅವರ್ಸಾದ ಡಾಂಬರ್ ಪ್ಲಾಂಟ್‌ನ ವಿರುದ್ಧ ಮೃತನು ಹಾಗೂ ಇತರರು ನೀಡಿದ ದೂರುಗಳಿಗೆ

ಸಂಬಂಧಿಸಿದಂತೆ ದಾಖಲೆಗಳನ್ನು ಕವಚ ಪತ್ರದೊಂದಿಗೆ ನೀಡಿರುತ್ತಾರೆ. ಮೃತನ ತಾಯಿಯ ರಕ್ತದ ಮಾದರಿಯನ್ನು ಸಂಗ್ರಹಿಸಲು ಮಾನ್ಯ ನ್ಯಾಯಾಲಯವು ದಿನಾಂಕವನ್ನು ನಿಗದಿ ಮಾಡಿದ್ದರಿಂದ, ದಿ.14-11-2018 ರಂದು ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ದಿ.16-11-2018 ರಂದು ನ್ಯಾಯಾಲಯದಲ್ಲಿ ಹಾಜರಾಗಿ, ರಕ್ತದ ಮಾದರಿಯನ್ನು ಸಂಗ್ರಹಿಸುವಂತೆ ಕೋರಿಕೊಂಡಿರುತ್ತೇನೆ.

32. ತನಿಖೆಯ ಕಾಲದಲ್ಲಿ 1 ನೇ ಆರೋಪಿಯ ಸಿ.ಡಿ.ಆರ್. ನಲ್ಲಿ ಚಾಸಾ-34 ರವರಿಗೆ ಕರೆ ಮಾಡಿರುವುದು ಕಂಡುಬಂದಿದ್ದು, ಅದರಂತೆ ದಿ.15-11-2018 ರಂದು ನಾನು ಸಾಕ್ಷಿದಾರರಾದ ಚಾಸಾ-34 ರವರನ್ನು ಠಾಣೆಗೆ ಬರಮಾಡಿಕೊಂಡು, ಅವರ ವಿಚಾರಣೆ ಮಾಡಿ, ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.16-11-2018 ರಂದು ಚಾಸಾ-4 ಮತ್ತು 7 ರವರಿಗೆ ರಕ್ತ ಮಾದರಿಯನ್ನು ಸಂಗ್ರಹಿಸುವ ಕಾಲಕ್ಕೆ ನ್ಯಾಯಾಲಯದಲ್ಲಿ ಹಾಜರಿರುವಂತೆ ನೋಟಿಸ್ ನೀಡಿರುತ್ತೇನೆ. ಸದರಿ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-48 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-48(ಬಿ) ಎಂದು ಗುರುತಿಸಲಾಯಿತು. ಅದೇ ದಿನ ವೈದ್ಯಾಧಿಕಾರಿಗಳು ನ್ಯಾಯಾಲಯದಲ್ಲಿ ಹಾಜರಿದ್ದ ಮೃತನ ತಾಯಿಯ ರಕ್ತದ ಮಾದರಿಯನ್ನು ಡಿ.ಎನ್.ಎ. ಸಲುವಾಗಿ ಸಂಗ್ರಹಿಸಿ ನನಗೆ ನೀಡಿದ್ದು, ಅದನ್ನು ನಮ್ಮ ಸಿಬ್ಬಂದಿಯಾದ ಚಾಸಾ-49 ರವರ ಮೂಲಕ ಬೆಂಗಳೂರಿನ ಎಫ್.ಎಸ್.ಎಲ್. ಗೆ ಕಳುಹಿಸಿರುತ್ತೇನೆ. ಮೃತನ ತಾಯಿಯ ಗುರುತಿಸುವಿಕೆಯ ನಮೂನೆಯನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿರುತ್ತದೆ. ಸದರಿ ನಮೂನೆಯೊಂದಿಗೆ ನೀಡಿದ ಫಾರ್ವರ್ಡಿಂಗ್ ನೋಟ್‌ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-145 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-145(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-41 ರವರು ಮಂಗಳೂರಿನ ಆರ್.ಎಫ್.ಎಸ್.ಎಲ್. ನಿಂದ ಸ್ವೀಕೃತಿ ಪತ್ರವನ್ನು ತಂದು ಹಾಜರುಪಡಿಸಿರುತ್ತಾರೆ. ಈ ಬಗ್ಗೆ ಚಾಸಾ-41 ರವರಿಂದ ಹೇಳಿಕೆ ಮತ್ತು ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರ್.ಎಫ್.ಎಸ್.ಎಲ್. ರವರು ನೀಡಿದ ಸ್ವೀಕೃತಿ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-93 ಎಂದು ಗುರುತಿಸಲಾಗಿರುತ್ತದೆ.

33. ದಿ.18-11-2018 ರಂದು ಚಾಸಾ-49 ರವರು ಬೆಂಗಳೂರಿನ ಎಫ್.ಎಸ್.ಎಲ್. ನಿಂದ ಸ್ವೀಕೃತಿ ಪತ್ರವನ್ನು ತಂದು ಹಾಜರುಪಡಿಸಿರುತ್ತಾರೆ ಹಾಗೂ ಈ ಬಗ್ಗೆ ಆತನ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸ್ವೀಕೃತಿ ಪತ್ರವನ್ನು ಈಗಾಗಲೇ ನಿಪಿ-116 ಎಂದು ಗುರುತಿಸಲಾಗಿರುತ್ತದೆ. ಈ ಪ್ರಕರಣದ ಪ್ರ.ವ. ವರದಿ ಹಾಗೂ ದೂರನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ಚಾಸಾ-48 ರವರಿಂದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.22-11-2018 ರಂದು ಕಾರವಾರದ ಬಂದರು ಅಧಿಕಾರಿಗಳಿಗೆ ಬಂದರಿನಲ್ಲಿ ಅಧಿಕೃತವಾಗಿ ನೋಂದಣಿಯಾಗಿರುವ ಶಿಪ್ಪಿಂಗ್ ಏಜೆನ್ಸಿಗಳ ಮಾಹಿತಿಯನ್ನು ನೀಡುವಂತೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ-102 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-102(ಎ) ಎಂದು ಗುರುತಿಸಲಾಯಿತು. ಮೃತನು ಚಾಸಾ-25 ರವರಿಗೆ ಸೇರಿದ ಪೊಯಿನೂರ್ ಶಿಪ್ಪಿಂಗ್ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದಾಗ ಅವರು ಆತನಿಗೆ ನೀಡಿದ ದ್ವಿಚಕ್ರ ವಾಹನದ ದಾಖಲೆಯನ್ನು ಹಾಗೂ ಪೊಯಿನೂರ್ ಶಿಪ್ಪಿಂಗ್ ಏಜೆನ್ಸಿಯ ನೋಂದಣಿ ಪತ್ರ, ನವೀಕರಣ ಪರವಾನಿಗೆ ಮತ್ತು ಮೃತನಿಗೆ ನೀಡಿದ ಅಧಿಕಾರ ಪತ್ರವನ್ನು ಚಾಸಾ-25 ರವರು ದಿ.24-11-2018 ರಂದು ನೀಡಿರುತ್ತಾರೆ. ವಾಹನದ ಆರ್.ಸಿ. ಪ್ರತಿಯನ್ನು ಈಗಾಗಲೇ ನಿಪಿ-149 ಎಂದು, ಶಿಪ್ಪಿಂಗ್ ಏಜೆನ್ಸಿಯ ನೋಂದಣಿ ಪತ್ರವನ್ನು ನಿಪಿ-146 ಎಂದು, ನವೀಕರಣ ಪತ್ರವನ್ನು ನಿಪಿ-147 ಎಂದು ಮತ್ತು ಅಧಿಕಾರ ಪತ್ರವನ್ನು ನಿಪಿ-148 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ಬಂದರು ಅಧಿಕಾರಿಗಳು, ಕಾರವಾರದ ಬಂದರಿನಲ್ಲಿ ಅಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿರುವ ಏಜೆನ್ಸಿಗಳ ಮಾಹಿತಿಯನ್ನು ಕವಚ ಪತ್ರದೊಂದಿಗೆ ನೀಡಿರುತ್ತಾರೆ. ಬಂದರು ಅಧಿಕಾರಿಗಳು ನೀಡಿದ ದಾಖಲೆಗಳನ್ನು ಈಗಾಗಲೇ ನಿಪಿ-103 ರಿಂದ 106 ಎಂದು, ಕವಚ ಪತ್ರವನ್ನು ನಿಪಿ-107 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-107(ಬಿ) ಎಂದು ಗುರುತಿಸಲಾಯಿತು.

34. ದಿ.25-11-2018 ರಂದು ಬಂದರು ಇಲಾಖೆಯ ನಿರ್ದೇಶಕರಿಗೆ ಕಾರವಾರದ ಬಂದರಿನಲ್ಲಿ ಅಧಿಕೃತವಾಗಿ ನೋಂದಣಿಗೊಂಡು ಕಾರ್ಯ ನಿರ್ವಹಿಸುತ್ತಿರುವ ಏಜೆನ್ಸಿಗಳ, ಸದರಿ ಏಜೆನ್ಸಿಗಳಿಗೆ ಬಂದಂತಹ ಸರಕುಗಳ ಮಾಹಿತಿ, ಹೀಗೆ ಒಟ್ಟು 6 ಮಾಹಿತಿಗಳನ್ನು ನೀಡುವಂತೆ ಕೋರಿಕೊಂಡಿರುತ್ತೇನೆ. ದಿ.03-12-2018 ರಂದು ಬೆಳಿಗ್ಗೆ 1 ನೇ ಆರೋಪಿಯು

ಗೋವಾದ ಕಡೆಗೆ ತಲೆಮರೆಸಿಕೊಂಡಿರುವುದಾಗಿ ಮಾಹಿತಿ ಬಂದಿದ್ದು, ಅದರಂತೆ ಆತನ ಪತ್ತೆಗಾಗಿ ನಮ್ಮ ಸಿಬ್ಬಂದಿಯಾದ ಚಾಸಾ–42 ಮತ್ತು 43 ರವರನ್ನು ನೇಮಿಸಿ ಕಳುಹಿಸಿಕೊಟ್ಟಿದ್ದು, ಅವರು 1 ನೇ ಆರೋಪಿಯನ್ನು ಗೋವಾದ ಮಡಗಾಂವ್ ರೈಲ್ವೇ ನಿಲ್ದಾಣದಲ್ಲಿ ಪತ್ತೆ ಹಚ್ಚಿ ದಿ.04–12–2018 ರಂದು ರಾತ್ರಿ 12.30 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಂತರ 1 ನೇ ಆರೋಪಿಯನ್ನು ಕೂಲಂಕುಷವಾಗಿ ವಿಚಾರಣೆ ಮಾಡಿದಾಗ, ಆತ ತಾನು ಪ್ರೇಮ್ ಕುಮಾರನನ್ನು ಕೊಲೆ ಮಾಡಲು 2 ನೇ ಆರೋಪಿಯನ್ನು ನೇಮಿಸಿದ ಬಗ್ಗೆ ಹಾಗೂ ಹಣ ನೀಡಿದ ಬಗ್ಗೆ ಒಪ್ಪಿಕೊಂಡಿದ್ದು, ಆತನ ಸ್ವ–ಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ–15 ಮತ್ತು 16 ರವರನ್ನು ಪಂಚರಾಗಿ ಬರುವಂತೆ ನೋಟಿಸ್ ನೀಡಿ, ಅವರ ಸಮಕ್ಷಮ 1 ನೇ ಆರೋಪಿಯ ಅಂಗಶೋಧನೆ ಮಾಡಿದಾಗ, ಆತನ ಪ್ಯಾಂಟಿನ ಬಲಬದಿಯ ಕಿಸೆಯಲ್ಲಿ ಒಂದು ಪರ್ಸ್ ಇದ್ದು, ಅದನ್ನು ತೆರೆದು ನೋಡಿದಾಗ, ಅದರಲ್ಲಿ ಅಪರಾಧ ಘಟಿಸಿದ ನಂತರ ಪ್ರಯಾಣಿಸಿದ ಒಟ್ಟು 15 ರೈಲ್ವೇ ಟೀಕೇಟುಗಳು ಇದ್ದವು, ಒಂದು ಸ್ಟೇಟ್ ಬ್ಯಾಂಕಿನ ಡೆಬಿಟ್ ಕಾರ್ಡ್, ರೂ.1,470/– ನಗದು ಹಣ, Ncel ಎಂದು ಬರೆದಿರುವ ಒಂದು ಸಿಮ್ ಕಾರ್ಡ್ ಇದ್ದವು. ನಂತರ ಆತನ ಪ್ಯಾಂಟಿನ ಎಡಬದಿಯ ಕಿಸೆಯಲ್ಲಿ ಒಂದು ನೋಕಿಯಾ ಕೀ–ಪ್ಯಾಡ್ ಮೊಬೈಲ್ ಇದ್ದು, ಅದರಲ್ಲಿ ಒಂದು ಐಡಿಯಾ ಸಿಮ್ ಕಾರ್ಡ್ ಇರುತ್ತದೆ ಹಾಗೂ ಸದರಿ ಫೋನ್ ಚಾಲೂ ಸ್ಥಿತಿಯಲ್ಲಿರುತ್ತದೆ. ನಂತರ ಆರೋಪಿಯ ಕೈಯಲ್ಲಿ ಒಂದು ನೀಲಿ ಬಣ್ಣದ ಟ್ರ್ಯಾವೆಲ್ ಬ್ಯಾಗ್ ಇದ್ದು, ಅದನ್ನು ತೆರೆದು ನೋಡಿದಾಗ, ಅದರಲ್ಲಿ ತಿಳಿ ಗುಲಾಬಿ ಬಣ್ಣದ ಒಂದು ಶರ್ಟ್, ನೀಲಿ ಬಣ್ಣದ ಒಂದು ಜೀನ್ಸ್ ಪ್ಯಾಂಟ್, ಬಿಳಿ ಬಣ್ಣ ಚೌಕಳಿ ಇರುವ ಒಂದು ಲುಂಗಿ, western union money ರಶೀದಿ, 1 ನೇ ಆರೋಪಿಗೆ ಸೇರಿದ ಡ್ರೈವಿಂಗ್ ಲೆಸೆನ್ಸ್ ಆಧಾರ ಕಾರ್ಡ್, ಇನ್ನೊಂದು ಸ್ಯಾಮ್‌ಸಂಗ್  ಮೊಬೈಲ್ ಮತ್ತು ಅದರಲ್ಲಿ ಒಂದು ಏರ್‌ಟೆಲ್ ಇರುತ್ತವೆ ಸದರಿ ಮೊಬೈಲ್ ಸಹ ಚಾಲೂ ಸ್ಥಿತಿಯಲ್ಲಿ ಇರುತ್ತವೆ. ಒಂದು ಚಾರ್ಜರ್ ಇರುತ್ತದೆ.

35. ಸದರಿ ವಸ್ತುಗಳನ್ನು ರಾತ್ರಿ 12.30 ರಿಂದ 1.20 ರವರೆಗೆ ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡು, ನಿಪಿ–62 ರಂತೆ ಪಂಚನಾಮೆ ಮಾಡಿ, ನಿಪಿ–63 ರಂತೆ ಫೋಟೊ ತೆಗೆಸಿರುತ್ತೇನೆ. ನಿಪಿ–62 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–62(ಡಿ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಎಂ.ಓ–14 ಪರ್ಸ್, ಎಂ.ಓ–15 ರೂ.1,470/– ನಗದು, ಎಂ.ಓ–16 Ncel ಸಿಮ್ ಕಾರ್ಡ್, ಎಂ.ಓ–17 ನೋಕಿಯಾ

ಮೊಬೈಲ್, ಎಂ.ಓ–18 ಟ್ರಾವೆಲ್ ಬ್ಯಾಗ್ ನ್ನು ನೋಡಿ ಗುರುತಿಸಿರುತ್ತಾರೆ. ಅದಲ್ಲದೇ, 1 ನೇ ಆರೋಪಿಗೆ ಸೇರಿದ ಪಿಂಕ್ ಬಣ್ಣದ ಶರ್ಟನ್ನು ನೋಡಿ ಗುರುತಿಸಿದ್ದು, ಅದನ್ನು ಎಂ.ಓ–22 ಎಂದು, ನೀಲಿ ಬಣ್ಣದ ಜೀನ್ಸ್ ಪ್ಯಾಂಟನ್ನು ನೋಡಿ ಗುರುತಿಸಿದ್ದು, ಅದನ್ನು ಎಂ.ಓ–23 ಎಂದು ಮತ್ತು ಲುಂಗಿಯನ್ನು ಎಂ.ಓ–24 ಎಂದು, ಸ್ಯಾಮ್‌ಸಂಗ್ ಮೊಬೈಲ್ ನ್ನು ಎಂ.ಓ–25 ಎಂದು, ಚಾರ್ಜರ್ ನ್ನು ಎಂ.ಓ–26 ಎಂದು ಗುರುತಿಸಲಾಯಿತು. 1 ನೇ ಆರೋಪಿಯಿಂದ ಜಪ್ತುಪಡಿಸಿಕೊಂಡ ರೈಲ್ವೇ ಟಿಕೇಟುಗಳನ್ನು ಈಗಾಗಲೇ ನಿಪಿ–76 ರಿಂದ 90 ಎಂದು ಗುರುತಿಸಲಾಗಿರುತ್ತದೆ. ಎಸ್.ಬಿ.ಐ. ಡೆಬಿಟ್ ಕಾರ್ಡನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–167 ಎಂದು ಗುರುತಿಸಲಾಯಿತು. western union money ರಶೀದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–168 ಎಂದು, 1 ನೇ ಆರೋಪಿಯ ಡ್ರೈವಿಂಗ್ ಲೆಸೆನ್ಸ್ ಹಾಗೂ ಆಧಾರ್ ಕಾರ್ಡನ್ನು ನಿಪಿ–169 ಮತ್ತು ನಿಪಿ–170 ಎಂದು ಗುರುತಿಸಲಾಯಿತು. ರೈಲ್ವೇ ಟಿಕೇಟುಗಳು ಮಾಸಿ ಹೋಗುವ ಸಾಧ್ಯತೆ ಇದ್ದರಿಂದ, ಅವುಗಳನ್ನು 6 ಪುಟಗಳಲ್ಲಿ ಜೆರಾಕ್ಸ್ ಮಾಡಿಸಿ, ನಂತರ ಅವುಗಳನ್ನು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡು ಪಂಚನಾಮೆ ಜರುಗಿಸಿರುತ್ತೇನೆ. ಸದರಿ ಜೆರಾಕ್ಸ್ ಮಾಡಿದ ಪ್ರತಿಗಳನ್ನು ಈಗಾಗಲೇ ನಿಪಿ–65 ರಿಂದ 70 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–65(ಬಿ) ಯಿಂದ 70(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಈಗಾಗಲೇ ನಿಪಿ–64 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–64(ಸಿ) ಎಂದು ಗುರುತಿಸಲಾಯಿತು.

36. ಜಪ್ತುಪಡಿಸಿಕೊಂಡ ವಸ್ತುಗಳನ್ನು ಸ್ವತ್ತುಪಟ್ಟಿಯಲ್ಲಿ ಅಳವಡಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆನಂತರ 1 ನೇ ಆರೋಪಿಗೆ ದಸ್ತಗಿರಿ ನಿಯಮ ಪಾಲಿಸಿ, ಮಾನ್ಯ ನ್ಯಾಯಾಲಯಕ್ಕೆ ಸೂಕ್ತ ಬೆಂಗಾವಲಿನೊಂದಿಗೆ ಹಾಜರುಪಡಿಸಿರುತ್ತೇನೆ. ಆನಂತರ ದಿ.05–12–2018 ರಂದು 1 ನೇ ಆರೋಪಿಯನ್ನು ಪೊಲೀಸ್ ಕಸ್ಟಡಿಗೆ ನೀಡುವಂತೆ ಮಾನ್ಯ ನ್ಯಾಯಾಲಯಕ್ಕೆ ಕೋರಿಕೊಂಡಿರುತ್ತೇನೆ. ಅದೇ ದಿನ, 1 ನೇ ಆರೋಪಿಯನ್ನು ತಂದು ಹಾಜರುಪಡಿಸಿದ ಚಾಸಾ–42 ಮತ್ತು 43 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.06–12–2018 ರಂದು, 1 ನೇ ಆರೋಪಿಯನ್ನು ಮಾನ್ಯ ನ್ಯಾಯಾಲಯದಿಂದ ಪೊಲೀಸ್ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ. 1 ನೇ ಆರೋಪಿಯು ತನ್ನ ಸ್ವ–ಇಚ್ಛಾ ಹೇಳಿಕೆಯಲ್ಲಿ

ತಾನು 4 ನೇ ಆರೋಪಿಯೊಂದಿಗೆ ದಾಂಡೇಲಿಯ ಕೋಗಿಲ್ ಬನಕ್ಕೆ ಹೋಗಿ, ಅಲ್ಲಿ 1 ನೇ ಆರೋಪಿಯು 2 ನೇ ಆರೋಪಿಯನ್ನು ಭೇಟಿ ಮಾಡಿ, ಪ್ರೇಮ್ ಕುಮಾರನನ್ನು ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ, ಚಾಸಾ–13 ಮತ್ತು 14 ರವರನ್ನು ಪಂಚರನ್ನಾಗಿ ಬರುವಂತೆ ನೋಟಿಸ್ ನೀಡಿ, ನಂತರ ನಾವುಗಳು ಹಾಗೂ ಪಂಚರು 1 ನೇ ಆರೋಪಿಯೊಂದಿಗೆ ದಾಂಡೇಲಿಯ ಕೋಗಿಲ್ ಬನಕ್ಕೆ ಹೋಗಿದ್ದು, ಅಲ್ಲಿ 1 ನೇ ಆರೋಪಿಯು ತಾನು 2 ನೇ ಆರೋಪಿಯೊಂದಿಗೆ ಸೇರಿ, ಕೊಲೆಗೆ ಸಂಚು ರೂಪಿಸಿದ ಸ್ಥಳವನ್ನು ತೋರಿಸಿದ್ದು, ನಂತರ ನಾನು ಸದರಿ ಸ್ಥಳವನ್ನು ಪರಿಶೀಲಿಸಿ, ಸಂಜೆ 5.15 ರಿಂದ 6.45 ಗಂಟೆಯವರೆಗೆ ನಿಪಿ–59 ರಂತೆ ಪಂಚನಾಮೆ ಮಾಡಿ, ನಿಪಿ–60 ಮತ್ತು 61 ರಂತೆ ಫೋಟೊ ತೆಗೆಸಿರುತ್ತೇನೆ. ನಿಪಿ–59 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–59(ಡಿ) ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನಿಪಿ–58 ನೋಟಿಸಿನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–58(ಸಿ) ಎಂದು ಗುರುತಿಸಲಾಯಿತು. ನಂತರ ಠಾಣೆಗೆ ವಾಪಾಸು ಬಂದು, ಆರೋಪಿಯನ್ನು ಭದ್ರಿಕೆಯಲ್ಲಿಟ್ಟಿರುತ್ತೇನೆ.

37. ಪ್ರೇಮ್ ಕುಮಾರನ ಕೊಲೆಯಾದ ನಂತರ 1 ನೇ ಆರೋಪಿಯನ್ನು ಗೋವಾಕ್ಕೆ ಬಿಟ್ಟುಬರಲು 4 ನೇ ಆರೋಪಿಯು ಚಾಸಾ–36 ರವರಿಗೆ ಸೇರಿದ ಮಹೀಂದ್ರಾ ಕಾರು ನಂ.ಕೆಎ–19/ಎಂ.ಎಫ್–9020 ನೇದನ್ನು ಪಡೆದುಕೊಂಡಿದ್ದು, ಸದರಿ ಕಾರನ್ನು ಚಾಸಾ–36 ರವರು ದಿ.07–12–2018 ರಂದು ನಮ್ಮ ಠಾಣೆಗೆ ತಂದು ಹಾಜರುಪಡಿಸಿದ್ದು, ಆ ಸಮಯದಲ್ಲಿ ಚಾಸಾ–8 ಮತ್ತು 15 ರವರನ್ನು ಪಂಚರಾಗಿ ಬರುವಂತೆ ನೋಟಿಸ್ ನೀಡಿದ್ದು, ಸದರಿ ಪಂಚರ ಸಮಕ್ಷಮ ಚಾಸಾ–36 ರವರು ಹಾಜರುಪಡಿಸಿದ ಕಾರನ್ನು ಪರಿಶೀಲಿಸಿದಾಗ, ಕಾರಿನ ಡ್ಯಾಶ್‌ಬೋರ್ಡ್ ನಲ್ಲಿ ಸದರಿ ಕಾರಿನ ಆರ್.ಸಿ. ದೊರೆತಿರುತ್ತದೆ. ನಂತರ ನಾನು ಸದರಿ ಕಾರನ್ನು ಜಪ್ತುಪಡಿಸಿಕೊಂಡು, ನಿಪಿ–72 ರಂತೆ ಪಂಚನಾಮೆ ಮಾಡಿರುತ್ತೇನೆ ಹಾಗೂ ನಿಪಿ–73 ರಂತೆ ಫೋಟೊ ತೆಗೆದಿರುತ್ತೇನೆ. ಆ ಸಮಯದಲ್ಲಿ ಚಾಸಾ–36 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಹೇಳಿಕೆಯನ್ನು ಈಗಾಗಲೇ ನಿಪಿ–92 ಎಂದು ಗುರುತಿಸಲಾಗಿರುತ್ತದೆ. ನಿಪಿ–72 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–72(ಡಿ) ಎಂದು ಗುರುತಿಸಲಾಯಿತು. ಸದರಿ ಜಪ್ತುಪಡಿಸಿಕೊಂಡ ವಾಹನವನ್ನು ಅದರ ಮಾಲೀಕರು ಈಗಾಗಲೇ ನ್ಯಾಯಾಲಯದಿಂದ ಬಿಡಿಸಿಕೊಂಡು ಹೋಗಿದ್ದು, ಅದನ್ನು ನಿಪಿ–73 ಫೋಟೊದಲ್ಲಿ

ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಪಂಚರಿಗೆ ನೀಡಿದ ನಿಪಿ-71 ನೋಟಿಸ್ ನಲ್ಲಿರುವ ಸಾಕ್ಷಿಯನ್ನು ಸಹಿಯನ್ನು ನಿಪಿ-71(ಬಿ) ಎಂದು ಗುರುತಿಸಲಾಯಿತು.

38. 1 ನೇ ಆರೋಪಿಯು ಕೊಲೆಗೆ ಸಂಚು ರೂಪಿಸಿದ ಸ್ಥಳಕ್ಕೆ ಹೋಗಲು ಬಳಸಿದ ಕಾರು ನಂ.ಕೆಎ-30/ಎಂ-7535 ನೇದನ್ನು ತನ್ನ ಶಿಪ್ಪಿಂಗ್ ಏಜೆನ್ಸಿಯ ಕಚೇರಿಯ ಮುಂದೆ ಇಟ್ಟಿರುವುದಾಗಿ ಹೇಳಿ, ದಿ.07-12-2018 ರಂದು ನಮ್ಮನ್ನು ಹಾಗೂ ಪಂಚರನ್ನು ಕರೆದುಕೊಂಡು ಹೋಗಿ ಕಾರನ್ನು ತೋರಿಸಿದ್ದು, ಪಂಚರ ಸಮಕ್ಷಮ ಸದರಿ ಕಾರನ್ನು ಪರಿಶೀಲಿಸಿದಾಗ, ಆ ಕಾರಿನಲ್ಲಿ ಆರ್.ಸಿ. ಕಾರ್ಡ್ ದೊರೆತಿರುತ್ತದೆ. ನಂತರ ನಾನು ಕಾರನ್ನು ಹಾಗೂ ಆರ್.ಸಿ. ಕಾರ್ಡ್ ನ್ನು ಜಪ್ತುಪಡಿಸಿಕೊಂಡು, ನಿಪಿ-74 ರಂತೆ ಪಂಚನಾಮೆ ಮಾಡಿ, ನಿಪಿ-75 ರಂತೆ ಫೋಟೊ ತೆಗೆಸಿರುತ್ತೇನೆ. ನಿಪಿ-74 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-74(ಸಿ) ಎಂದು ಗುರುತಿಸಲಾಯಿತು. 1 ನೇ ಆರೋಪಿಯ ಕಾರಿನ ಆರ್.ಸಿ. ಕಾರ್ಡ್ ನ್ನು ನಿಪಿ-171 ಎಂದು ಗುರುತಿಸಲಾಯಿತು. ಆನಂತರ ಠಾಣೆಗೆ ಬಂದು, ಮೇಲೆ ಹೇಳಿದ ಜಪ್ತುಪಡಿಸಿಕೊಂಡ ಸ್ವತ್ತುಗಳನ್ನು ಸ್ವತ್ತುಪಟ್ಟಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. 1 ನೇ ಆರೋಪಿಯ ಪೊಲೀಸ್ ಕಸ್ಟಡಿಯ ಅವಧಿ ಮುಗಿದ ಕಾರಣ, ಆತನನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ